ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಪಿಎಚ್.ಡಿ ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಪ್ರಬಂಧದ ಪೂರ್ವಭಾವಿ ಸಾರಲೇಖ

"ಪ.ಗು. ಸಿದ್ದಾಪುರ ಅವರ ಜೀವನ ಮತ್ತು ಸಾಹಿತ್ಯ"

ಸಂಶೋಧನಾ ವಿದ್ಯಾರ್ಥಿನಿ

ಮಣೂರ ಸುಧಾರಾಣಿ ಶಿವಪ್ಪಾ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ ಎಂ.ಎ. ಪಿಎಚ್.ಡಿ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

2019

ಪ.ಗು. ಸಿದ್ದಾಪುರ ಅವರ ಜೀವನ ಮತ್ತು ಸಾಹಿತ್ಯ

ಪರಿವಿಡಿ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ – ೧ ಮಕ್ಕಳ ಸಾಹಿತ್ಯ ಪರಂಪರೆ

೧.೧) ಆಧುನಿಕ ಪೂರ್ವ ಇತಿಹಾಸ

೧.೨) ಆಧುನಿಕ ಇತಿಹಾಸ

ಅಧ್ಯಾಯ –೨ ಪ.ಗು. ಸಿದ್ದಾಪುರ ಅವರ ಜೀವನ

೨.೧) ಪ.ಗು ಸಿದ್ದಾಪುರ ಅವರ ಊರು, ಮನೆತನ, ಜನನ, ಬಾಲ್ಯ, ಶಿಕ್ಷಣ, ವೈವಾಹಿಕ ಮತ್ತು ಕೌಟುಂಬಿಕ ಜೀವನ, ಆಹಾರ, ಉಡುಪು, ದಿನಚರಿ, ಆಸಕ್ತಿ, ಅಭಿರುಚಿ, ವೃತ್ತಿ ಜೀವನ

೨.೨) ಪ.ಗು. ಸಿದ್ದಾಪುರ ಅವರ ಸಾಹಿತ್ಯ ರಚನೆಯ ಸ್ಥೂಲ ಪರಿಚಯ, ಗೌರವ, ಮನ್ನಣೆ, ಪ್ರಶಸ್ತಿ, ಸ್ಥಾನಮಾನಗಳು

ಅಧ್ಯಾಯ – ೩. ಪ.ಗು. ಸಿದ್ದಾಪುರ ಅವರ ಸಾಹಿತ್ಯ ಸೃಷ್ಟಿ : ಒಂದು ಸಮಗ್ರ ನೋಟ

೩.೧) ಮಕ್ಕಳ ಸಾಹಿತ್ಯ

೩.೨) ಪ್ರೌಢ ಸಾಹಿತ್ಯ

ಅಧ್ಯಾಯ –೪. ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯ: ಸಾಂಸ್ಕೃತಿಕ ನೋಟ

೪.೧) ಪ. ಗು. ಸಿದ್ದಾಪುರ ಅವರ ಸಾಹಿತ್ಯದಲ್ಲಿ ನೈತಿಕ ಮೌಲ್ಯಗಳು

೪.೨) ವೈಜ್ಞಾನಿಕ ವಿಚಾರಗಳು

೪.೩) ದೇಶ ಪ್ರೇಮ

೪.೪) ವ್ಯಕ್ತಿ ಚಿತ್ರಣ

೪.೫) ಜೀವನ ಮೌಲ್ಯಗಳ ಪ್ರತಿಪಾದನೆ

ಅಧ್ಯಾಯ – ೫. ಪ.ಗು. ಸಿದ್ದಾಪುರ ಅವರ ಮಕ್ಕಳ ಕವಿತೆಗಳು ಮತ್ತು ಶಿಶುಪ್ರಾಸಗಳು

೫.೧) ಮಕ್ಕಳ ಕವಿತೆಗಳ ವಸ್ತು ವೈವಿಧ್ಯತೆ ಹಾಗೂ ಮಾನವೀಯ ಮೌಲ್ಯಗಳ ಹುಡುಕಾಟ

ಅಧ್ಯಾಯ – ೬. ಪ.ಗು. ಸಿದ್ದಾಪುರ ಅವರ ಇತರ ಸಾಹಿತ್ಯ ಸಂಪಾದನೆ

೬.೧) ಸಣ್ಣ ಕಥೆಗಳು

೬.೨) ಸಣ್ಣ ಕಥೆಗಳ ವಿಭಿನ್ನ ನೆಲೆಗಳು

೬.೩) ಜೀವನ ಚರಿತ್ರೆಗಳು

೬.೪) ಜೀವನ ಚರಿತ್ರೆಗಳ ಮೌಲ್ಯ ಪ್ರಜ್ಞೆ
೬.೫) ಸಂಪಾದನಾ ಕೃತಿಗಳು

ಅಧ್ಯಾಯ – ೭. ಪ.ಗು. ಸಿದ್ದಾಪುರ ಅವರ ಸಾಹಿತ್ಯದ ಭಾಷೆ, ವಸ್ತು, ಶೈಲಿ ಮತ್ತು ತಂತ್ರ
೭.೧) ಸಾಹಿತ್ಯದ ಮೇಲೆ ಪ್ರಭಾವ
೭.೨) ಸಾಹಿತ್ಯದ ಧೋರಣೆಗಳು

ಅಧ್ಯಾಯ – ೮. ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯ : ಒಂದು ತೌಲನಿಕ ನೋಟ

ಅಧ್ಯಾಯ – ೯. ಪ.ಗು. ಸಿದ್ದಾಪುರ ಅವರ ಅಪ್ರಕಟಿತ ಸಾಹಿತ್ಯ
ಸಮಾರೋಪ
ಅನುಬಂಧಗಳು
೧) ಗ್ರಂಥಗಳು
ಅ) ಮೂಲ ಆಕರಗಳು
ಬ) ಪರಾಮರ್ಶನ ಗ್ರಂಥಗಳು
೨. ಪ.ಗು. ಸಿದ್ದಾಪುರ ಅವರ ವಂಶವೃಕ್ಷ
೩. ಪ.ಗು. ಸಿದ್ದಾಪುರ ಅವರ ಹಸ್ತಾಕ್ಷರದ ಮಾದರಿ
೪. ಪ.ಗು. ಸಿದ್ದಾಪುರ ಅವರ ಜೀವನದ ಪ್ರಮುಖ ಘಟನಾವಳಿಗಳು
೫. ಛಾಯಾ ಚಿತ್ರಗಳು

ಸಂಶೋಧನೆ ಮಾಡುತ್ತ ಹೋದಂತೆ ಈ ಅಧ್ಯಯಗಳಲ್ಲಿ ಮಾರ್ಪಾಡಾಗುವ ಸಾಧ್ಯತೆಗಳಿರುತ್ತವೆ. ಅವಶ್ಯಕತೆ ಎನಿಸಿದಲ್ಲಿ ಅಧ್ಯಾಯಗಳನ್ನು ಮಾರ್ಪಾಡಿಸಲಾಗುವುದು.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಮಾನವನಿಗೆ ಬಾಲ್ಯಾವಸ್ಥೆಯು ಒಂದು ಮಹತ್ವಪೂರ್ಣ ಘಟ್ಟ ಒಬ್ಬ ಮಾನವನ ವ್ಯಕ್ತಿತ್ವದ ಬೇರುಗಳು ಚಿಗುರೊಡೆಯುವುದು ಇದೇ ಹಂತದಲ್ಲಿ; Child is a father of man ಎಂಬ ಉಕ್ತಿ ಅಕ್ಷರಶಃ ಸತ್ಯವಾಗಿದೆ. ಮಗು ತಾನು ಆಸ್ವಾದಿಸಿ ಸಂಗ್ರಹಿಸಿದ ಮೌಲ್ಯಗಳು ಬದುಕಿನುದ್ದಕ್ಕೂ ಕೈ ಹಿಡಿದು ನಡೆಸುತ್ತವೆ. ಒಂದು ರಾಷ್ಟದ ಭವಿಷ್ಯ ಮತ್ತು ಆಗು ಹೋಗುಗಳು ಪ್ರಜೆಗಳ ಬಾಲ್ಯವನ್ನು ಅವಲಂಬಿಸಿರುತ್ತವೆ. ನಮ್ಮ ದೇಶ ರಾಮರಾಜ್ಯವಾಗಬೇಕಾದರೆ ನಮ್ಮ ಮಕ್ಕಳು ರಾಮ, ಲಕ್ಷ್ಮಣರಾಗಬೇಕು, ಸಚ್ಚಾರಿತ್ರ್ಯವಂತರಾಗಬೇಕು. ದೇಶಪ್ರೇಮ, ಶಿಸ್ತು, ಸಹಾಯ, ಸಹಕಾರ, ಸಹೋದರತೆ, ಸಾಹಸ, ಸ್ವಾವಲಂಬನ, ಸ್ನೇಹ, ತ್ಯಾಗ, ವಿನಯ, ದಯೆ, ಮುಂತಾದ ಮೌಲ್ಯಗಳು ಮಕ್ಕಳಲ್ಲಿ ಅಳವಡಿಸಬೇಕು. ಅಂದಾಗ ಮಾತ್ರ ಮಗುವಿನಲ್ಲಿ ದೇಶವನ್ನು ಪ್ರೀತಿಸುವ, ಅನ್ಯಧರ್ಮಗಳನ್ನು ಮೆಚ್ಚುವ ವಿಶಿಷ್ಟಗುಣಗಳು ಬೆಳೆಯುತ್ತವೆ. ಮಾನವನ ಅಭ್ಯುದಯ ಬಾಲ ವ್ಯಸ್ಥೆಯನ್ನು ಅವಲಂಬಿಸಿದೆ. ಮಾನವ ಕುಲದ ಹುಟ್ಟು ಬೆಳವಣಿಗೆ, ಅಳಿವು ಉಳಿವುಗಳು ಬಾಲ್ಯಾವಸ್ಥೆಯಲ್ಲಿ ಅವನು ಪಡೆದ ಸಂಸ್ಕಾರದ ಗಟ್ಟಿಪಾಯದ ಮೇಲೆ ನಿಲ್ಲುತ್ತದೆ. ಆದ್ದರಿಂದ ಆರೋಗ್ಯದಾಯಕವಾದ ಬಾಲ್ಯ ಬದುಕಿನ ಮುಸ್ಸಂಜೆಯನ್ನು ಸುಖ– ಶಾಂತಿಯಿಂದ ಸಮೃದ್ಧಿಗೊಳಿಸುತ್ತದೆ. ಹೀಗೆ ಬದುಕನ್ನು ಸಮೃದ್ಧಗೊಳಿಸುವಲ್ಲಿ ಬಾಲ್ಯ ಜೀವನ ಹೀಗೆ ಮುಖ್ಯವೋ ಮಕ್ಕಳ ಸಾಹಿತ್ಯವೋ ಅಷ್ಟೇ ಮುಖ್ಯವಾಗಿದೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 20ನೆಯ ಶತಮಾನ ಅತ್ಯಂತ ವಿಶಿಷ್ಟವಾದದ್ದು. ಈ ಸಂದರ್ಭದಲ್ಲಿ ಮಹಾಕಾವ್ಯ, ಭಾವಗೀತೆ, ಸಣ್ಣಕತೆ, ಕಾದಂಬರಿ, ಪ್ರಬಂಧ, ನಾಟಕ, ವಿಚಾರ ಸಾಹಿತ್ಯ ಮೊದಲಾದವುಗಳನ್ನು ಮೈಗೂಡಿಸಿಕೊಂಡು ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ. ಇವುಗಳಲ್ಲಿ 'ಮಕ್ಕಳ ಸಾಹಿತ್ಯ'ವೂ ಗಮನಾರ್ಹವಾದುದು.

'ಮಕ್ಕಳ ಸಾಹಿತ್ಯ' ಎಂದರೆ ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ರೂಪಿಸಿ ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯ. 'ಕನ್ನಡದಲ್ಲಿ ಈ ಉದ್ದೇಶವನ್ನು ಈಡೇರಿಸುವಂಥ ಸಾಹಿತ್ಯ ಇತ್ತಾದರೂ, ಅದಕ್ಕೆ 'ಮಕ್ಕಳ ಸಾಹಿತ್ಯ'ವೆಂಬ ಸ್ಪಷ್ಟರೂಪ ಬಂದದ್ದು ಅಧುನಿಕ ಶಿಕ್ಷಣ ಹಾಗೂ ನವೋದಯ ಸಾಹಿತ್ಯ ಸಂದರ್ಭದಲ್ಲಿ ಎನ್ನಬಹುದು. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬೇರನ್ನು ಜಾನಪದ ಪರಂಪರೆಯಲ್ಲಿಯೇ ಕಾಣಬಹುದು. ಅಜ್ಜಿ ಹೇಳುವ ಲಾಲಿಪದಗಳು, ಪ್ರಾಸ ಬದ್ಧವಾದ ಆಟದ ಪದಗಳು, ಒಗಟುಗಳು, ಕಥೆಗಳು, ಅದ್ರಲ್ಲೂ ರಾಜಕುಮಾರಿಯರ ಕಥೆ, ಅದ್ಭುತ ರಮ್ಯಕಥೆ, ಕಾಗಕ್ಕ ಗುಬ್ಬಕ್ಕನ ಕಥೆ, ಪಂಚತಂತ್ರದ ಕಥೆ– ಇವೆಲ್ಲ ಮಕ್ಕಳ ಮನಸ್ಸನ್ನು

ಉಲ್ಲಾಸಗೊಳಿಸಿವೆ. ಆದರೂ ಆಧುನಿಕ ಕಾಲದಲ್ಲಿ ಮುದ್ರಣ ಕಲೆ ಬಂದ ಮೇಲೆ ಮಕ್ಕಳಸಾಹಿತ್ಯ ವಿಪುಲವಾಗಿ ಬೆಳೆಯಿತು. ಕನ್ನಡದ ಪ್ರಸಿದ್ಧ ಕವಿಗಳಾದ ಪಂಜೆಮಂಗೇಶರಾಯ, ಹೊಯ್ಸಳರು, ಕುವೆಂಪು, ಬೇಂದ್ರೆ, ಕಾರಂತರಂಥ ಹಿರಿಯ ಸಾಹಿತಿಗಳು ಮಕ್ಕಳ ಮನಸ್ಸನ್ನು ಪ್ರವೇಶಿಸಿ, ಅವರಿಗೆ ಇಷ್ಟವಾಗುವಂಥ ಸಾಹಿತ್ಯ ರಚಿಸಿದರು. ಕ್ರಮೇಣ ಮಕ್ಕಳ ಸಾಹಿತ್ಯ ರಚನೆ ಮಾಡುವವರ ಸಂಖ್ಯೆ ಹೆಚ್ಚಾಗತೊಡಗಿತು. ಪತ್ರಿಕಾ ಮಾಧ್ಯಮ ಇದಕ್ಕೆ ಪ್ರಚಾರ ನೀಡಿತು. ಮಕ್ಕಳ ಸಾಹಿತ್ಯದಲ್ಲೂ ಕಥೆ, ಕಾವ್ಯ, ಪ್ರಬಂಧ, ಕಾದಂಬರಿ, ನಾಟಕ, ಒಗಟುಗಳು ಮುಂತಾದ ಪ್ರಕಾರಗಳು ವ್ಯಾಪಕವಾಗಿ ಬೆಳೆದು ಬಂದಿದ್ದರಿಂದ ಅದೊಂದು ಪರಿಪೂರ್ಣ ಸಾಹಿತ್ಯವೆಂದು ಮಾನ್ಯತೆ ಪಡೆಯಿತು.

ಮಕ್ಕಳ ಸಾಹಿತ್ಯವನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನ ವಿಷಯವಾಗಿ ಆಯ್ಕೆ ಮಾಡುವಲ್ಲಿ ವಿಜಯಪುರದ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಸುವರ್ಣಾವಕಾಶ ನೀಡಿದ್ದು, ಮಕ್ಕಳ ಸಾಹಿತ್ಯಕ್ಕೆ ಒದಗಿಸಿದ ಗೌರವವೆಂದು ಭಾವಿಸುವಂತಾಗಿದೆ. ಮಕ್ಕಳ ಸಾಹಿತ್ಯದ ತವರೂರು ವಿಜಯಪುರ ಜಿಲ್ಲೆ. ಇಲ್ಲಿನ ಶಿಕ್ಷಕ ಸಾಹಿತಿಗಳು ಮಕ್ಕಳ ಸಾಹಿತ್ಯಕ್ಕೆ ಅಗಾಧ ಕೊಡುಗೆ ನೀಡಿದ್ದಾರೆ. ಈ ಜಿಲ್ಲೆಯ ಮಕ್ಕಳ ಸಾಹಿತಿಗಳು ಇಷ್ಟೆಲ್ಲಾ ಸಾಧನೆ ಮಾಡಿದ್ದರು ಅವರನ್ನು ಗುರುತಿಸುವ ಕಾರ್ಯ ನಡೆದದ್ದು ಅಲ್ಪ ಮಾತ್ರವೇ ಈ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲೆಯ ಮಕ್ಕಳ ಸಾಹಿತ್ಯ ರಚನಾ ಪರಂಪರೆಯಲ್ಲಿ ಕಂಡುಬರುವ ಪ್ರತಿಭಾನ್ವಿತ ಲೇಖಕ ಪ.ಗು. ಸಿದ್ದಾಪುರ ಅವರು ಒಬ್ಬರಾಗಿದ್ದಾರೆ.

ವಿಜಯಪರ ಜಿಲ್ಲೆಯ ಪ್ರಸಿದ್ಧ ಮಕ್ಕಳ ಸಾಹಿತಿ ಪ.ಗು. ಸಿದ್ದಾಪುರ ಅವರು ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದು, ಮಕ್ಕಳ ಸಾಹಿತಿಯಾಗಿ ಬೆಳೆದಿರುವ ಅಪೂರ್ವ ವ್ಯಕ್ತಿತ್ವ ಉಳ್ಳವರು. ಇವರು ಸುಮಾರು ಕೃತಿಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಮಕ್ಕಳ ಕವಿತೆಗಳು, ಕಥೆ, ಶಿಶು ಪ್ರಾಸಗಳು, ಜೀವನ ಚರಿತ್ರೆಗಳು, ಕಥನಕವನಗಳನ್ನು ಅಷ್ಟೇ ಅಲ್ಲದೇ ಪ್ರೌಢಸಾಹಿತ್ಯದಲ್ಲೂ ಕೃಷಿ ಮಾಡಿದ್ದಾರೆ.

ಪ.ಗು. ಸಿದ್ದಾಪುರ ಅವರ ಕುರಿತು ಈವರೆಗೆ ಪತ್ರಿಕೆ, ದೂರದರ್ಶನದಲ್ಲಿ ಸಂಕ್ಷಿಪ್ತವಾಗಿ ಪರಿಚಯಗಳು ಬಂದಿವೆ. ಆದರೆ ಇದನ್ನು ಹೊರತು ಪಡಿಸಿ ಅವರ ಬದುಕು ಮತ್ತು ಸಾಹಿತ್ಯ ಕೃತಿಗಳನ್ನು ಕುರಿತು ವ್ಯಾಪಕವಾದ ಮತ್ತು ತಲಸ್ಪರ್ಶಿಯಾದ ಅಧ್ಯಯನ ಇದುವರೆಗೆ ನಡೆಯದೇ ಇರುವುದನ್ನು ಅನುಲಕ್ಷಿಸಿ ಆ ಕೊರತೆಯನ್ನು ತುಂಬುವ ಪ್ರಯತ್ನವಾಗಿ, ಎಲೆ ಮರೆಯ ಕಾಯಿಯಂತಿರುವ ಪ.ಗು, ಸಿದ್ದಾಪುರ ಅವರ ಜೀವನ ಮತ್ತು ಮಕ್ಕಳ ಸಾಹಿತ್ಯದ ಕುರಿತು ಮಹಾಪ್ರಬಂಧವನ್ನು ರಚಿಸಿ, ಮಕ್ಕಳ ಸಾಹಿತ್ಯದ ಖ್ಯಾತ

ಬರಹಗಾರರಲೊಬ್ಬರಾದ ಸಿದ್ದಾಪುರ ಅವರ ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ವಿವರವಾಗಿ ಪರಿಶೀಲನೆ ಮಾಡುವ ಉದ್ದೇಶವನ್ನಿರಿಸಿಕೊಳ್ಳಲಾಗಿದೆ.

ಈ ಮಹಾಪ್ರಬಂಧವು 9 ಅಧ್ಯಾಯಗಳನ್ನು ಒಳಗೊಂಡಿರುತ್ತದೆ.

ಪ್ರಸ್ತುತ ಅಧ್ಯಯನವು ಪ.ಗು. ಸಿದ್ದಾಪುರ ಅವರು ವಿಜಯಪುರ ಜಿಲ್ಲೆಯ ಮಕ್ಕಳ ಸಾಹಿತಿಗಳಲ್ಲಿ ಮೂರನೆಯ ತಲೆಮಾರಿನವರು. ಇವರ ಜೀವನ ಹಾಗೂ ಅವರ ಸಮಗ್ರ ಸಾಹಿತ್ಯವನು 9 ಅಧ್ಯಾಯಗಳಲ್ಲಿ ಪರಿಚಯಿಸಿಕೊಡಲಾಗುತ್ತದೆ.

"ಪ.ಗು.ಸಿದ್ದಾಪುರ ಅವರ ಜೀವನ ಮತ್ತು ಸಾಹಿತ್ಯ" ಎಂಬ ಅಧ್ಯಯನಕ್ಕೆ ಈ ಅಧ್ಯಾಯ ಪೂರ್ವ ಪೀಠಿಕೆಯನ್ನು ಒದಗಿಸುತ್ತದೆ. ಖ್ಯಾತ ಮಕ್ಕಳ ಸಾಹಿತಿ ಎಂದೆ ಕನ್ನಡಿಗರಿಗೆ ಪರಿಚಯವಿರುವ ಪ.ಗು. ಸಿದ್ದಾಪುರ ಅವರು ಮೂಲತಃ ಒಬ್ಬ ಸಾಹಿತ್ಯದ ಕವಿ, ಕತೆಗಾರ ಎಂಬುದನ್ನು ಎತ್ತಿ ತೋರಿಸುವ ಹಾಗೂ ಅವರ ಸಾಹಿತ್ಯದ ಗುಣಾತ್ಮಕತೆಯನ್ನು ಮಕ್ಕಳ ಸಾಹಿತ್ಯದ ವಿಶೇಷತೆಯನ್ನು ಗುರುತಿಸುವ ಮತ್ತು ಸಮಕಾಲೀನ ಮಕ್ಕಳ ಸಾಹಿತ್ಯ ಮತ್ತು ಪರಿಸರದ ಹಿನ್ನೆಲೆಯಲ್ಲಿ ಪ.ಗು. ಸಿದ್ದಾಪುರ ಅವರ ಜೀವನ ಮತ್ತು ಕೊಡುಗೆಗಳನ್ನು ವಸ್ತುನಿಷ್ಠ ಅವಲೋಕನ ಮಾಡುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರ ಜೊತೆಗೆ ಪ್ರಸ್ತುತ ಅಧ್ಯಯನದ ಗೊತ್ತುಗುರಿಗಳನ್ನು ಹಾಗೂ ವ್ಯಾಪ್ತಿಗಳ ಬಗೆಗೂ ಪೂರ್ವ ಪರಿಚಯ ನೀಡಲಾಗುತ್ತದೆ.

ಅಧ್ಯಾಯ –೧

'ಮಕ್ಕಳ ಸಾಹಿತ್ಯ ಪರಂಪರೆ'

ಎಂಬುದು ಈ ಸಂಶೋಧನಾ ಮಹಾಪ್ರಬಂಧದ ಮೊದಲನೆಯ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಕುರಿತು ಮಾಹಿತಿಯನ್ನು ನೀಡಲಾಗುತ್ತದೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಿಕೊಳ್ಳುವ ವೇದ ಉಪನಿಷತ್ತುಗಳಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯದವರೆಗೆ ಮಕ್ಕಳ ಸಾಹಿತ್ಯ ಬೆಳೆದು ಬಂದಿರುವುದನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗುತ್ತದೆ. ಅಧ್ಯಯನದ ಪ್ರಾರಂಭದಲ್ಲಿ ಪ್ರಪಂಚ ಹಾಗೂ ಭಾರತದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಲಾಗುತ್ತದೆ. ನಂತರ

ಆಧುನಿಕ ಪೂರ್ವ ಇತಿಹಾಸ ಮತ್ತು ಆಧುನಿಕ ಇತಿಹಾಸ ಸಾಹಿತ್ಯ ಕಾಲದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಅಧ್ಯಯನಕ್ಕೊಳಪಡಿಸಲಾಗುತ್ತದೆ.

ಮಕ್ಕಳ ಸಾಹಿತ್ಯದ ಇತಿಹಾಸ ಹುಟ್ಟುವ ಮಗುವಿನ ಅಳುವಿನೊಂದಿಗೆ ಇಲ್ಲವೆ ನಗುವಿನೊಂದಿಗೆ ಮಕ್ಕಳ ಸಾಹಿತ್ಯ ಹುಟ್ಟಿತೆನ್ನಬಹುದು. ಆದರೆ ಇದೊಂದು ಕಲ್ಪನೆಯ ಮಾತಾದರೂ ಸಾಹಿತ್ಯದ ಇತಿಹಾಸ ಸನಾತನವನ್ನುವಷ್ಟು ಪುರಾತನವಾಗಿದೆ.

ಸಾಹಿತ್ಯವು ಮನಸ್ಸಿನ ಪರಿಶ್ರಮ ಬುದ್ಧಿಯ ಚಮತ್ಕಾರ, ಬದುಕಿನ ಹೋರಾಟದೊಂದಿಗೆ ರೂಪ ಪಡೆಯುವುದು ಸಹಜವಾಗಿದೆ. ಆದರೆ ಮಕ್ಕಳ ಸಾಹಿತ್ಯವು ಮುಖ್ಯವಾಗಿ ಮಕ್ಕಳ ಎಳೆ ಮನಸ್ಸನ್ನು ಹಾಗೂ ಬುದ್ಧಿ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ಮನೋವೈಜ್ಞಾನಿಕ ಸಾಹಿತ್ಯವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯದ ಹುಟ್ಟು ಮನ:ಶಾಸ್ತ್ರ ಮತ್ತು ವೈಚಾರಿಕ ನಿಲುವುಗಳಲ್ಲಿ ರೂಪಪಡೆಯಿತೆಂದು ಹೇಳಬಹುದು.

ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಮಕ್ಕಳ ಸಾಹಿತ್ಯದ ಬೇರುಗಳು ಜನಪದ ಸಾಹಿತ್ಯದಲ್ಲಿಯೇ ಸಿಗುತ್ತವೆ.

ಆಡಿಬಾ ನನ ಕಂದ ಅಂಗಾಲ ತೊಳದೇನ ।

ತೆಂಗಿನಕಾಯ ತಿಳಿನೀರ ತಕ್ಕೊಂಡ ।

ಬಂಗಾರದ ಮಾರಿ ತೊಳದೇನ ।

ಇಂಥ ತ್ರಿಪದಿಗಳು ಜನಪದ ಸಾಹಿತ್ಯವೆನಿಸಿದರೂ ಮಕ್ಕಳ ಸಾಹಿತ್ಯದ ಬೇರುಗಳು ಜನಪದ ಸಾಹಿತ್ಯದಲ್ಲಿ ಹೇಗೆ ಸಿಗುತ್ತವೆ ಎಂಬುದಕ್ಕೆ ನಿದರ್ಶನವೆನಿಸುತ್ತವೆ.

ಜನಪದ ಸಾಹಿತ್ಯವನ್ನು ಹೊರತುಪಡಿಸಿದರೆ ಮಕ್ಕಳ ಸಾಹಿತ್ಯದ ವ್ಯಾಪಕ ಬೆಳವಣಿಗೆಯನ್ನು ಗ್ರಂಥ ಸಾಹಿತ್ಯದಲ್ಲಿ ಕಾಣುತ್ತೇವೆ. ಹಳಗನ್ನಡ ಹಾಗೂ ನಡುಗನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯವನ್ನು ವಿರಳವಾಗಿ ಗುರುತಿಸಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯಕ್ಕಿಂತ ಮೊದಲು ದೊರೆಯುವ ಪುರಾಣ ಹಾಗೂ ಮಹಾಕಾವ್ಯಗಳಲ್ಲಿ ಮಕ್ಕಳಿಗೆ ಇಷ್ಟವಾಗುವ ಅನೇಕ ಸನ್ನಿವೇಶಗಳು ಬರುತ್ತವೆ. ವಡ್ಡಾರಾಧನೆ, ಪಂಚತಂತ್ರದಂಥ ಕೃತಿಗಳಲ್ಲಿ ಸಾಹಿತ್ಯದ ಆಶಯವನ್ನು ಗಮನಿಸಲು ಸಾಧ್ಯವಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೯ನೆಯ ಶತಮಾನದಲ್ಲಿ ರಚಿತವಾದ ಕಥಾರೂಪದ ಸೃಜನ ಸಾಹಿತ್ಯವೆಂದರೆ, ವಡ್ಡಾರಾಧನೆ. ಇದರಲ್ಲಿ ಪೂರ್ವದ ಹಳಗನ್ನಡ ಭಾಷೆಯಲ್ಲಿ ೧೯ ಕಥೆಗಳಿವೆ. ಎಲ್ಲಾ ಕಥೆಗಳು ಒಂದೇ ರೀತಿಯಲ್ಲಿ ಪ್ರಾರಂಭವಾಗುತ್ತವೆ. ಇದರಲ್ಲಿ ಸುಕುಮಾರಸ್ವಾಮಿಯ ಕಥೆ, ವಿದ್ಯುಚ್ಚೋರನೆಂಬ ರಿಸಿಯ ಕಥೆ, ಭದ್ರಬಾಹು ಭಟ್ಟಾರರ ಕಥೆ ಮುಂತಾದವುಗಳು ಕೆಲವು ಭಾಗಗಳು ಮಕ್ಕಳ ಕಥೆಗಳಾಗಿ ತೋರಿ ಬರುತ್ತವೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಇತಿಹಾಸ ಒಂದು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಕ್ರಿ.ಶ. ೧೦೩೧ರಲ್ಲಿ ದುರ್ಗಸಿಂಹ ರಚಿಸಿದ 'ಪಂಚತಂತ್ರ' ಎಂಬ ಕೃತಿ ಇದಕ್ಕೆ ಉದಾಹರಣೆ, ನಡುಗನ್ನಡದಲ್ಲಿ ಅಂದರೆ ೧೨ನೆಯ ಶತಮಾನದ ವಚನ ಸಾಹಿತ್ಯದಲ್ಲಿ ಮಕ್ಕಳಿಗೆ ಉತ್ತಮೋತ್ತಮವಾದ ಆದರ್ಶ ಬಿಂಬಿಸುವಂತಹ. ಅವರ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕಾರಿಯಾಗಬಲ್ಲಂತಹ, ಮಕ್ಕಳ ಓದಿಗೆ ತುಂಬಾ ಉಪಯುಕ್ತವಾಗಬಲ್ಲ ಅನೇಕ ವಚನಗಳು ಕಂಡುಬರುತ್ತವೆ. ವಚನಕಾರರು ದೇಶೀ ಭಾಷೆಯಲ್ಲಿ ಸಾಹಿತ್ಯ ರಚಿಸಿ ಹೊಸಕ್ರಾಂತಿಯನ್ನು ಮಾಡಿದರು.

ನಂತರ ಕೀರ್ತನ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಸಂಗತಿಗಳು ಕಂಡುಬರುತ್ತವೆ. ಪುರಂದರದಾಸರ 'ಗುಮ್ಮನ ಕರೆಯದಿರು ಅಮ್ಮ' ಎಂಬ ಕೀರ್ತನೆ ಇದು ಒಂದು ಅಪ್ಪಟ ಮಕ್ಕಳ ಕವನ ಎನ್ನುವಂತಿದೆ.

ಗುಮ್ಮನ ಕರೆಯದಿರು ಅಮ್ಮ ನೀನು

ಗುಮ್ಮನ ಕರೆಯದಿರು ॥ ಪ ॥

ಸುಮ್ಮನೆ ಇರುವೆನು, ಅಮ್ಮೀಯ ಬೇಡನು

ಮಮ್ಮು ಉಣ್ಣುತ್ತೇನೆ ಅಮ್ಮ ಅಳುವುದಿಲ್ಲ ॥

ಈ ಒಂದು ಕವನದಲ್ಲಿ ಮಗುವಿನ ಕಿಡಗೇಡಿತನದ ಸುಂದರವಾದ ಚಿತ್ರಣ ಬಂದಿದೆ. ಹಳೆಗನ್ನಡ, ಶಾಸನ, ನಡುಗನ್ನಡ ಸಾಹಿತ್ಯದಲ್ಲಿ ಕಂಡುಬರುವ ವಿವಿಧ ಕವಿಗಳು ಕಾಲಕಾಲಕ್ಕೆ ರಚನೆ ಮಾಡಿದ ಗ್ರಂಥಗಳಲ್ಲಿ ಮಕ್ಕಳ ಸಾಹಿತ್ಯದ ಅಂಶಗಳಿವೆ. ಆಧುನಿಕ ಇತಿಹಾಸ : ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಮೊಟ್ಟಮೊದಲಬಾರಿಗೆ ಉದಯವಾದದ್ದು ಕ್ರಿ.ಶ. ೧೮೬೨ ರಲ್ಲಿ ಜಿಮ್ಯಾಕ್ ಎಂಬುವವರ 'ಬಾಲಗೀತೆಗಳು' ಎಂಬ ಶಿಶು ಗೀತೆಗಳ ಸಂಕಲನ ಮುದ್ರಿಸಿ ಪ್ರಕಟಸಿದರು. ಇದು ಕನ್ನಡದ ಮೊಟ್ಟ ಮೊದಲ ಮಕ್ಕಳ ಸಾಹಿತ್ಯ ಕೃತಿಯಾಗಿದೆ. ನಂತರ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿ ಆರಂಭವಾಯಿತು.

ಚಿಕ್ಕಮಕ್ಕಳಿಗೋಸ್ಕರ ಪಂಜೆಯವರು ಸಂವೇದನಾಶೀಲ ಮನಸ್ಸುಳ್ಳ ಕಾವ್ಯಗಳನ್ನು ರಚಿಸಿದ್ದಾರೆ. ಚಿಕ್ಕವರಿಗಾಗಿ ಸರಳ ಸುಂದರ ಕನ್ನಡ ಪಠ್ಯ ಪುಸ್ತಕಗಳನ್ನು ಕಥೆ, ಕವಿತೆಗಳನ್ನು ಬರೆದರು. ಅವೆಲ್ಲವೂ ಪ್ರಕಟವಾಗಿ ದಕ್ಷಿಣಕನ್ನಡ ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಬೋಧಿಸಲ್ಪಟ್ಟಿವೆ. ಇಂಥ ಕನ್ನಡ ಶಿಶು ಸಾಹಿತ್ಯವನ್ನು ಮೊದಲು ಜಾರಿಗೆ ಸೃಷ್ಟಿಸಿದವರು ಪಂಜೆ ಮಂಗೇಶರಾಯರು, ಅವರನ್ನು ಶಿಶು ಸಾಹಿತ್ಯದ ಜನಕರೆಂದು ಕರೆಯುತ್ತಾರೆ. ಪಂಜೆಯವರು ಮಕ್ಕಳ ಮನಸ್ಸು ಬುದ್ಧಿ ಭಾವನೆಗಳ ಬಗ್ಗೆ ವಿಚಾರಮಾಡಿ ಅವರಿಗೆ ಬೇಕಾದಂತಹ ಸಾಹಿತ್ಯ ರಚಿಸಿಕೊಟ್ಟರು.

ಅಖಂಡ ಕನ್ನಡ ಸಾಹಿತ್ಯವನ್ನು ಬೇರೆ ಬೇರೆ ಕಾಲಘಟ್ಟಗಳ ಅಧ್ಯಯನದ ಅನುಕೂಲತೆಗಾಗಿ ವಿಭಾಗಿಸಿಕೊಂಡಿರುವಂತೆ ಮಕ್ಕಳ ಸಾಹಿತ್ಯವನ್ನು ನನ್ನ ಅಧ್ಯಯನದ ಅನುಕೂಲತೆಗೋಸ್ಕರ ಮೂರು ಘಟ್ಟಗಳನ್ನಾಗಿ ವಿಂಗಡಿಸಿಕೊಳ್ಳಲಾಗುತ್ತದೆ. ಏಕೆಂದರೆ ನಮ್ಮ ಸಾಹಿತ್ಯ ಪ್ರಕಾರಗಳು ವಿದೇಶಿಯರ ಪ್ರಭಾವಕ್ಕೊಳಗಾಗಿ ಬೆಳೆದು ಬಂದಿವೆ. ಇದಕ್ಕೆ ಸಮಾನಂತರವಾಗಿ ಅಂದಿನ ಅಗತ್ಯಗಳಿಗೆ ಅನುಗುಣವಾಗಿ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರೂಪಗೊಳ್ಳುತ್ತ ಬಂದಿದೆ. ಈ ಅವಧಿಯಲ್ಲಿ ಸೃಷ್ಟಿಸಿದ ಮಕ್ಕಳ ಸಾಹಿತ್ಯವನ್ನು ಮೂರು ಘಟ್ಟಗಳನ್ನಾಗಿ ವಿಂಗಡಿಸಲಾಗುತ್ತದೆ.

೧. ಪ್ರಥಮ ಘಟ್ಟ (೩ ರಿಂದ ವರ್ಷದ ಮಕ್ಕಳಿಗಾಗಿ) ೧೮೫೦– ೧೯೪೭ ೨. ದ್ವಿತೀಯ ಘಟ್ಟ (೬ ರಿಂದ ೯ ವರ್ಷದ ಮಕ್ಕಳಿಗಾಗಿ) ೧೯೪೭–೧೯೭೦

೩. ತೃತೀಯ ಘಟ್ಟ (೯ ರಿಂದ ೧೪ ವರ್ಷದ ಮಕ್ಕಳಿಗಾಗಿ) ೧೯೭೦ರ ಈಚೆಗೆ ಎಂದು ವಿಭಾಗ ಮಾಡಿಕೊಂಡು ಆಯಾಕಾಲ ಘಟ್ಟದಲ್ಲಿ ಬರುವ ಪ್ರಮುಖ ರಚನೆಕಾರರ ಸಾಹಿತ್ಯವನ್ನು ಅವರ ಕೊಡುಗೆಗೆಯನ್ನು ವಿವರಿಸಲು ಸಾಧ್ಯವಿದೆ.

ಅಧ್ಯಾಯ- ೨

ಪ.ಗು. ಸಿದ್ದಾಪುರ ಅವರ ಜೀವನ

ಈ ಸಂಶೋಧನಾ ಮಹಾಪ್ರಬಂಧದ ಎರಡನೆಯ ಅಧ್ಯಾಯ ಇದರಲ್ಲಿ ಪ.ಗು.ಸಿದ್ದಾಪುರ ಅವರ ಸಮಗ್ರವಾದ ಜೀವನ ಚರಿತ್ರೆಯನ್ನು ನಿರೂಪಿಸಲಾಗಿದೆ. ಮಾನವ ಆದರ್ಶಗಳಿಂದ ಕೂಡಿದ ಪ.ಗು. ಸಿದ್ದಾಪುರ ಅವರ ಜೀವನ ಮತ್ತು ಸಾಧನೆ ಇಂದಿನ ಸಮಾಜಕ್ಕೆ ಮಾರ್ಗದರ್ಶಿಯಾಗಿದೆ. ಕಷ್ಟಗಳ ಅಗ್ನಿಕುಂಡದಲ್ಲಿ ಹಾಯ್ದು ಜಯಶಾಲಿಗಳಾದ ಅವರ ಕೇವಲ ಶಿಕ್ಷಕರಾಗಿದ್ದರೆ ಕೆಲವೇ ಜನರ ನೆನಪಿನಲ್ಲಿ ಉಳಿಯುತ್ತಿದ್ದರು. ಇಂದು ಅವರನ್ನು ಸಮಾಜದ ಎಲ್ಲ ಜನರು, ಮಕ್ಕಳು ಅವರನ್ನು ಸ್ಮರಿಸುವುದಕ್ಕೆ ಶಿಕ್ಷಕ ವೃತ್ತಿಯ ಜೊತೆಗೆ ಪ್ರವೃತ್ತಿಯನ್ನಾಗಿ ಮಕ್ಕಳ ಸಾಹಿತ್ಯವನ್ನು ಆಯ್ಕೆಮಾಡಿಕೊಂಡಿದ್ದೇ ಕಾರಣ, ಅವರ ಬದುಕು ಮತ್ತು ಸಾಹಿತ್ಯ ಸಾಧನೆ ಇಂದಿನವರೆಗೆ ಅದ್ಭುತವಾಗಿ ತೋರಿದರೆ ಅದು ಆಶ್ಚರ್ಯವಲ್ಲ ಎಂಬ ಅಂಶವನ್ನು ಈ ಅಧ್ಯಾಯದಲ್ಲಿ ಹೇಳಲಾಗುತ್ತದೆ. ಈ ಅಧ್ಯಾಯದಲ್ಲಿ ಪ.ಗು. ಸಿದ್ದಾಪುರ ಅವರ ಬದುಕಿನ ವಿವಿಧ ಹಂತಗಳನ್ನು ಚಿತ್ರೀಕರಿಸಲಾಗಿದೆ. ವಿಜಯಪುರ ಜಿಲ್ಲೆಯ ಸಾಂಸ್ಕೃತಿಕ, ಸಾಹಿತ್ಯ ಪರಿಸರದ ಪರಿಚಯದಿಂದ ಹಿಡಿದು, ಪ.ಗು. ಸಿದ್ದಾಪುರ ಅವರ ಗ್ರಾಮ, ಮನೆತನದ ಹಿನ್ನೆಲೆಯೊಂದಿಗೆ ಪ್ರಾರಂಭವಾದ ಈ ಅಧ್ಯಾಯ ಕವಿಯ ಜನನ, ಬಾಲ್ಯ, ಶಿಕ್ಷಣ, ವೈವಾಹಿಕ ಮತ್ತು ಕೌಟುಂಬಿಕ ಜೀವನ, ಆಹಾರ, ಉಡುಪು, ದಿನಚರಿ, ಆಸಕ್ತಿ, ಅಭಿರುಚಿ, ವೃತ್ತಿಜೀವನ ಮತ್ತು ಸಿದ್ದಾಪುರ ಅವರ ಸಾಹಿತ್ಯ ರಚನೆಯ ಸ್ಥೂಲ ಪರಿಚಯ, ಹಿರಿಯ ಸಾಹಿತಿಗಳ ಸಂಪರ್ಕ ಮುಂತಾದವರ ಬದುಕಿನ ವಿವಿಧ ಸಾಂಸ್ಕೃತಿಕ ಮಜಲುಗಳನ್ನು ಚಿತ್ರಿಸುವುದರೊಂದಿಗೆ ಅವರಿಗೆ ಸಂದ ಗೌರವ ಮನ್ನಣೆ, ಪ್ರಶಸ್ತಿ, ಸ್ಥಾನಮಾನಗಳನ್ನು ಈ ಅಧ್ಯಾಯದಲ್ಲಿ ಕೊಡಲಾಗುತ್ತದೆ.

ಅಧ್ಯಾಯ-೩

ಪ.ಗು. ಸಿದ್ದಾಪುರ ಅವರ ಸಾಹಿತ್ಯ ಸೃಷ್ಟಿ : ಒಂದು ಸಮಗ್ರ ನೋಟ ಈ ಮಹಾಪ್ರಬಂಧದ ಮೂರನೆಯ ಅಧ್ಯಾಯ. ಈ ಅಧ್ಯಾಯವು ಮಹಾಪ್ರಬಂಧದ ಹೃದಯಭಾಗವಾಗಿದ್ದು ಅವರು ಹನ್ನೆರಡು ಕವನ ಸಂಕಲನ, ನಾಲ್ಕು ಕಥಾ ಸಂಕಲನಗಳು, ಒಂದು ಕಥನ ಕವನ, ಮೂರು ಜೀವನ ಚರಿತ್ರೆಗಳು, ಎರಡು ತ್ರಿಪದಿ ಸಂಕಲನಗಳು, ಒಂದು ಆಧುನಿಕ ವಚನ ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತಲೋಕಕ್ಕೆ ಉಣಬಡಿಸಿದ್ದಾರೆ.

ಪ.ಗು. ಸಿದ್ದಾಪುರ ಅವರ ಸಾಹಿತ್ಯ ಸೇವೆ ವಿಪುಲವಾದುದು. ಹಾಗೆಯೇ ವೈವಿದ್ಯಪೂರ್ಣವಾದದು. ಅವರ ಸಾಹಿತ್ಯವನ್ನು ಅವಲೋಕಿಸಿ (೧) ಪ್ರೌಢ ಸಾಹಿತ್ಯ (೧) ಮಕ್ಕಳ ಸಾಹಿತ್ಯವೆಂದು ವಿಂಗಡಿಸಲಾಗುತ್ತದೆ. ಮಕ್ಕಳ ಸಾಹಿತ್ಯವನ್ನು ಗದ್ಯ ಸಾಹಿತ್ಯ, ಪದ್ಯಸಾಹಿತ್ಯ, ಸಂಪಾದನಾ ಸಾಹಿತ್ಯ, ಇತರ ಸಾಹಿತ್ಯವನ್ನಾಗಿ ವಿಭಾಗ ಮಾಡಿ ಸಮಗ್ರ, ಅವಲೋಕನವನ್ನು ಮಾಡಲಾಗುತ್ತದೆ. ಸಾಹಿತ್ಯವನ್ನು ಒಂದು ಯೋಗವೆಂದು ಭಾವಿಸಿದ ಅವರು, ಸಾಹಿತ್ಯ ಸೃಷ್ಟಿಯನ್ನು ಒಂದು ತಪಸ್ಸೆಂದು ಸ್ವೀಕರಿಸಿದರು. ಗ್ರಾಮೀಣ ಪರಿಸರವನ್ನೇ ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡು ಎದುರಾದ ಸಂಕಷ್ಟಗಳನ್ನು ಧೈರ್ಯ, ತಾಳ್ಮೆಯಿಂದ ಎದುರಿಸಿ ಸಾತ್ವಿಕ ಬದುಕನ್ನು ರೂಪಿಸಿಕೊಂಡರು. ಅವರ ಗ್ರಾಮೀಣ ಜೀವನದ ಅನುಭವ ಅನನ್ಯವಾದುದು. ಅದೇ ಅವರ ಶಕ್ತಿಯೂ ಕುಡ. ಅವರ ಮಾತು ಕತೆಗಳಲ್ಲಿ, ಕಾವ್ಯಗಳಲ್ಲಿ ಮಿಂಚುತ್ತಿದ್ದದ್ದು ಅದೇ. ಈ ಅಧ್ಯಾಯದಲ್ಲಿ ಇವರ ಸಾಹಿತ್ಯದ ಸತ್ವ, ಮಹತ್ವ, ಪ್ರಸ್ತುತತೆ ಕುರಿತು ಸಮಗ್ರವಾಗಿ ವಿಶ್ಲೇಷಿಸಲಾಗುತ್ತದೆ.

ಅಧ್ಯಾಯ – ೪

ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯ : ಸಾಂಸ್ಕೃತಿಕ ನೋಟ ಎಂಬುದು ಈ ಮಹಾಪ್ರಬಂಧದ ನಾಲ್ಕನೆಯ ಅಧ್ಯಾಯವಾಗಿದೆ. ಪ.ಗು. ಸಿದ್ದಾಪುರ ಅವರ ಪದ್ಯ ಸಾಹಿತ್ಯದಲ್ಲಿ ೧೨ ಕವನ ಸಂಕಲನಗಳು, ಒಂದು ಕಥನ ಕವನ, ಗದ್ಯ ಸಾಹಿತ್ಯದಲ್ಲಿ ನಾಲ್ಕು ಕಥಾ ಸಂಕಲನ ಮತ್ತು ಮೂರು ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಈ ಎಲ್ಲ ಕೃತಿಗಳನ್ನು ಈ ವಿಶ್ಲೇಷಿಸಲಾಗುತ್ತದೆ.

ಈ ಅಧ್ಯಾಯದಲ್ಲಿ ಪ.ಗು. ಸಿದ್ದಾಪುರ ಅವರ ಸಾಹಿತ್ಯದಲ್ಲಿ ನೈತಿಕ ಮೌಲ್ಯಗಳು, ವೈಜ್ಞಾನಿಕ ವಿಚಾರಗಳು, ದೇಶಪ್ರೇಮ, ವ್ಯಕ್ತಿ ಚಿತ್ರಣ, ಜೀವನ ಮೌಲ್ಯಗಳ ಪ್ರತಿಪಾದನೆ ಎಂಬ ಐದು ಭಾಗಗಳನ್ನಾಗಿ ವಿಂಗಡಿಸಿ ಅಧ್ಯಯನ ಮಾಡಲಾಗುತ್ತದೆ.

ಅಧ್ಯಾಯ–೫

ಪ.ಗು. ಸಿದ್ದಾಪುರ ಅವರ ಮಕ್ಕಳ ಕವಿತೆಗಳು ಮತ್ತು ಶಿಶು ಪ್ರಾಸಗಳು ಎಂಬುದು ಈ ಮಹಾಪ್ರಬಂಧದ ಐದನೆಯ ಅಧ್ಯಾಯವಾಗಿದೆ.

ಈ ಅಧ್ಯಾಯದಲ್ಲಿ ಇವರ ಮಕ್ಕಳ ಕವಿತೆಗಳ ವಸ್ತು ವೈವಿಧ್ಯ ಹಾಗೂ ಮಾನವೀಯ ಮೌಲ್ಯಗಳ ಹುಡುಕಾಟ ಎಂಬ ಅಂಶವನ್ನು ವಿಶ್ಲೇಷಿಸಲಾಗುತ್ತದೆ. ಪ.ಗು. ಸಿದ್ದಾಪುರ ಅವರು ೧೨ ಶ್ರೇಷ್ಠ ಮಕ್ಕಳ ಕವನ ಸಂಕಲನಗಳನ್ನು ರಚಿಸಿದ್ದಾರೆ. ಇವರ ಪದ್ಯ ಸಾಹಿತ್ಯವನ್ನು ಸ್ಥೂಲವಾಗಿ ಪ್ರಕೃತಿ, ವಿಜ್ಞಾನ, ಮನುಷ್ಯ ಸಂಬಂಧ, ನಾಡು ನುಡಿಯ, ಪ್ರೇಮ, ಮಕ್ಕಳ ತುಂಟಾಟ ಮತ್ತು ಕಥನ ಕವನಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗುತ್ತದೆ.

ಪ.ಗು. ಸಿದ್ದಾಪುರ ಅವರ ಮೊದಲನೆಯ ಕವನ ಸಂಕಲನ 'ಬಣ್ಣದ ಚಿಟ್ಟೆ' ಇದರಲ್ಲಿ ೨೭ ಕವನಗಳಿವೆ. ಸಚಿತ್ರಗಳೊಂದಿಗೆ ಮೂಡಿ ಬಂದಿವೆ, ಇದು ೧೯೮೯ ರಲ್ಲಿ ಪ್ರಕಟವಾಗಿದೆ.

ಬಣ್ಣದ ಚಿಟ್ಟೆ ಹಾರಿಸಿ ಬಿಟ್ಟೆ.

ಚಿಣ್ಣರ ಲೋಕಕೆ ಮುದದಿಂದ

ಸಂತಸದಿಂದ ಉಳಿದರೆ ಚಂದ

ನನ್ನಯ ಮನಸಿಗೆ ಆನಂದ...

ಇವರ ಕವಿತೆಗಳು, ಮಕ್ಕಳ ಮನಸ್ಸಿಗೆ ಹಿಡಿಸುವ ಖುಷಿಕೊಡುವ ವಸ್ತುವಿಷಯಗಳನ್ನು ಹೊಂದಿವೆ. ಕವನಗಳು ನೇರ ಸರಳವಾದದು. ಪ್ರಾಸಬದ್ಧವಾಗಿವೆ. ಮಕ್ಕಳು ಹಾಡಿ ಕುಣಿಯಲು, ಅಭಿನಯಿಸಿ ಆನಂದಿಸಲು ಯೋಗ್ಯವಾಗಿವೆ. ಪ.ಗು. ಸಿದ್ದಾಪುರ ಅವರ ಹಲವಾರು ಕವಿತೆಗಳು ಸಂಯುಕ್ತ ಕರ್ನಾಟಕ, ಕರ್ಮವೀರ, ಸುಧಾ, ಪ್ರಜಾವಾಣಿ, ಪರಂಜ್ಯೋತಿ ಹಾಗೂ ದೀಪಾವಳಿ ವಿಶೇಷಾಂಕಗಳಲ್ಲಿ ಪ್ರಕಟವಾಗಿವೆ.

೧೯೯೨ ರಲ್ಲಿ 'ಬಾನು ಕುಸುಮ' ಕವಿತೆಯು ಕರ್ನಾಟಕ ಪಠ್ಯಪುಸ್ತಕ ನಿರ್ದೇಶನಾಲಯ ಇವರ ಕನ್ನಡ ಭಾರತಿ–೩ ಪಠ್ಯದಲ್ಲಿ ಆಯ್ಕೆಗೊಂಡಿದೆ. 'ಶಿಕ್ಷಕ' ಎಂಬ ಕವಿತೆಯು ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮಂಡಳದ ಕನ್ನಡ ಎರಡನೆಯ ವರ್ಗದ ಪಠ್ಯದಲ್ಲಿ ೨೦೧೩ರಲ್ಲಿ ಆಯ್ಕೆಯಾಗಿದೆ. ಪ.ಗು.

ಸಿದ್ದಾಪುರ ಅವರ ಹಲವಾರು ಕವನಗಳು ಕರ್ನಾಟಕ, ಕೇರಳ, ಮಹಾರಾಷ್ಟ್ರ, ಸಿ.ಬಿ.ಎಸ್.ಸಿ ಪಠ್ಯವಾಗಿವೆ. ಅವುಗಳನ್ನೆಲ್ಲಾ ಸಮಗ್ರವಾಗಿ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುತ್ತದೆ.

ಅಧ್ಯಾಯ-೬

'ಪ.ಗು. ಸಿದ್ದಾಪುರ ಅವರ ಇತರ ಸಾಹಿತ್ಯ ಸಂಪಾದನೆ' ಎಂಬುವುದು ಈ ಮಹಾಪ್ರಬಂಧದ ಆರನೆಯ ಅಧ್ಯಾಯವಾಗಿದೆ.

ಈ ಅಧ್ಯಾಯದಲ್ಲಿ ಪ.ಗು. ಸಿದ್ದಾಪುರ ಅವರು ಮಕ್ಕಳ ಸಾಹಿತಿಯಾಗಿ ಅಷ್ಟೇ ಉಳಿಯದೇ ಲೋಕಾನುಭವದ ಬರವಣಿಗೆಯ ಕಡೆಗೆ ಹೊರಳಿದ್ದನ್ನು ನೋಡುತ್ತೇವೆ. ಮಕ್ಕಳ ಸಾಹಿತ್ಯದಲ್ಲಿ ಪಳಗಿದ ಕೈ, ಶಿಷ್ಟ ಸಾಹಿತ್ಯದ ಕಡೆ ಹೊರಳಿದ ಮನಸ್ಸನ್ನು ನೋಡುತ್ತೇವೆ. ಈ ಕಾರಣವಾಗಿ ತ್ರಿಪದಿ ಮತ್ತು ಆಧುನಿಕ ವಚನಗಳನ್ನು ರಚಿಸಿದ್ದಾರೆ. ಪ.ಗು. ಸಿದ್ದಾಪುರ ಅವರು ಸಂಪಾದನೆ ಕಾರ್ಯದಲ್ಲಿ ತೊಡಗಿ ಹದಿನಾಲ್ಕು ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. ಈ ಸಂಪಾದನ ಕೃತಿಗಳಲ್ಲಿ ಅನೇಕ ವಿಷಯಗಳು ಅಡಗಿವೆ. ಚಿತ್ರಕಲೆ, ಮಕ್ಕಳ ಕಾವ್ಯ, ಮಕ್ಕಳ ಕಥೆ, ಅನೇಕ ವಿಚಾರಗೋಷ್ಠಿಗಳು, ಉಪನ್ಯಾಸಗಳು, ವಿಚಾರ ಸಂಕಿರ್ಣ, ಚರ್ಚೆ, ಅನೇಕ ಸಂಘ ಸಂಸ್ಥೆಗಳು ನಡೆದು ಬಂದ ಸವಿನೆನಪುಗಳ ಸರಮಾಲೆ ಇಲ್ಲಿವೆ. ಈ ಮಹಾಪ್ರಬಂಧದಲ್ಲಿ ಇವುಗಳನ್ನು ಒಂದೊಂದಾಗಿ ಅಧ್ಯಯನ ಮಾಡಲಾಗುವುದು.

ಅಧ್ಯಯನದ ಅನುಕೂಲತೆಗೋಸ್ಕರ ಈ ಅಧ್ಯಾಯದಲ್ಲಿ ಸಣ್ಣ ಕಥೆಗಳು, ಸಣ್ಣ ಕಥೆಗಳ ವಿಭಿನ್ನ ನೆಲೆಗಳು, ಜೀವನ ಚರಿತ್ರೆಗಳು, ಜೀವನ ಚರಿತ್ರೆಗಳ ಮೌಲ್ಯ ಪ್ರಜ್ಞೆ, ತ್ರಿಪದಿ, ವಚನಗಳು ಎಂದು ವಿಭಾಗ ಮಾಡಿಕೊಳ್ಳಲಾಗುತ್ತದೆ.

ಅಧ್ಯಾಯ –೭

ಪ.ಗು. ಸಿದ್ದಾಪುರ ಅವರ ಸಾಹಿತ್ಯದ ವಸ್ತು, ಭಾಷೆ, ಶೈಲಿ ಮತ್ತು ತಂತ್ರ : ಎಂಬುದು ಈ ಮಹಾಪ್ರಬಂಧದ ಏಳನೆಯ ಅಧ್ಯಾಯವಾಗಿದೆ.

ಆದಿಕವಿ ಪಂಪನಿಂದ ಹಿಡಿದು ಇಂದಿನವರೆಗೂ ಕನ್ನಡ ಸಾಹಿತ್ಯದಲ್ಲಿ ವಸ್ತು, ಭಾಷೆ, ತಂತ್ರ ಹಾಗೂ ಶೈಲಿಯ ಪ್ರಯೋಗಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಒಂದು ಕೃತಿಯ ಯಶಸ್ಸಿನ

ಮೆಟ್ಟಿಲುಗಳಾದ ಇವು ಆಯಾ ಕವಿಯ ಜಾಣ್ಮೆಯನ್ನು, ಕೌಶಲ್ಯವನ್ನು ಅವಲಂಬಿಸಿರುತ್ತವೆ. ಯಾವುದೇ ಪ್ರಕಾರದ ಸಾಹಿತ್ಯ ಅದು ಯಶಸ್ವಿಯಾಗಬೇಕಾದರೆ ಅದರಲ್ಲಿ ಮೂಲವಸ್ತು, ವಿಷಯ, ಮುಖ್ಯಪಾತ್ರ ವಹಿಸುತ್ತದೆ.

ಮಕ್ಕಳ ಸಾಹಿತ್ಯದಲ್ಲಿ ವಿಷಯ ವಸ್ತು, ಭಾಷೆ, ಶೈಲಿ, ತಂತ್ರ ಇವುಗಳಲ್ಲಿ ಯಾವುದು ಮುಖ್ಯ ಯಾವುದು ಅಮುಖ್ಯ ಎಂಬುದಕ್ಕಿಂತ ಅದು ಮೊದಲು ಮಕ್ಕಳ ಸಾಹಿತ್ಯವಾಗಿದ್ದು, ಮಕ್ಕಳ ಮನಸ್ಸಿಗೆ ಹತ್ತಿರವಾಗುವುದು ಮತ್ತು ಮಕ್ಕಳ ಮನಸ್ಸಿಗೆ ಪ್ರಿಯವಾಗಿರುವುದು ಪ್ರಮುಖವಾಗಿದೆ. ಈ ಹಿನ್ನೆಲೆಯಲ್ಲಿ ವಿಷಯ ಅಥವಾ ವಸ್ತುವನ್ನು ನಾವು ಮಕ್ಕಳ ಮನೋವೈಜ್ಞಾನಿಕ ಬೆಳವಣಿಗೆಯ ಹಂತಗಳಿಂದ ಈ ಅಧ್ಯಾಯದಲ್ಲಿ ವಿಭಾಗಿಸಲಾಗುತ್ತದೆ. ಈ ಅಧ್ಯಾಯದಲ್ಲಿ ಪ.ಗು, ಸಿದ್ದಾಪರ ಅವರ ಸಾಹಿತ್ಯದ ಮೇಲೆ ಆದ ಪ್ರಭಾವ ಮತ್ತು ಸಿದ್ದಾಪುರ ಅವರ ಸಾಹಿತ್ಯದ ಧೋರಣೆಗಳು ಎಂದು ಎರಡು ಅಂಶಗಳನ್ನಾಗಿ ಅಭ್ಯಾಸಿಸಲಾಗುತ್ತದೆ.

ಅಧ್ಯಾಯ – ೮

ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯ ಒಂದು ತೌಲನಿಕ ನೋಟ ಎಂಬುದು ಈ ಸಂಶೋಧನಾ ಪ್ರಬಂಧದ ಎಂಟನೆಯ ಅಧ್ಯಾಯವಾಗಿದೆ.

ಈ ಅಧ್ಯಾಯದಲ್ಲಿ ಇತರ ಮಕ್ಕಳ ಸಾಹಿತ್ಯದೊಂದಿಗೆ ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗುತ್ತದೆ.

ಅಧ್ಯಾಯ–೯

ಪ.ಗು. ಸಿದ್ದಾಪುರ ಅವರ ಅಪ್ರಕಟಿತ ಸಾಹಿತ್ಯ ಎಂಬುದು ಈ ಮಹಾಪ್ರಬಂಧದ ಒಂಬತ್ತನೆಯ ಅಧ್ಯಾಯವಾಗಿದೆ.

ಈ ಅಧ್ಯಾಯದಲ್ಲಿ ಪ.ಗು. ಸಿದ್ದಾಪುರ ಅವರ ಅಪ್ರಕಟಿತ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ.ಗು. ಸಿದ್ದಾಪುರ ಅವರ 'ಅಕ್ಕರೆ ಅಜ್ಜ' ಎಂಬುದು ಅಪ್ರಕಟಿತ ಕೃತಿ, ಇದರಲ್ಲಿ ಪ್ರತಿಭೆ, ಪಾಂಡಿತ್ಯ, ವಿದ್ವಾಂಸರ ಜೊತೆಗಿನ ಒಡನಾಟದ ಕುರಿತು ವಿಷಯವಸ್ತುವಿದೆ. ಇದು ಮಕ್ಕಳ ಸಾಹಿತ್ಯದ

ಕೃತಿಯಾದರೆ ಪ್ರೌಢ ಸಾಹಿತ್ಯದಲ್ಲಿ 'ಹಣತೆ ಹಚ್ಚಿದವರು' ಎಂಬುದು ಇವರ ಅಪ್ರಕಟಿತ ಕೃತಿಯಾಗಿದೆ. ಹೀಗೆ ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯ ಮತ್ತು ಪ್ರೌಢ ಸಾಹಿತ್ಯದಲ್ಲಿ ಹಲವಾರು ಅಪ್ರಕಟಿತ ಕೃತಿಗಳಿವೆ. ಇವರ ಅಪ್ರಕಟಿತ ಸಾಹಿತ್ಯವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುತ್ತದೆ.

ಸಮಾರೋಪ

ಮಹಾಪ್ರಬಂಧದ ಕೊನೆಯ ಘಟ್ಟ ಸಮಾರೋಪ. ಇದರಲ್ಲಿ ಇದುವರೆಗೆ ಮಾಡಿದ ಅಧ್ಯಯನದ ಫಲಿತಗಳನ್ನು ಸಾದರಪಡಿಸಲಾಗುತ್ತದೆ. ಪ.ಗು. ಸಿದ್ದಾಪುರ ಅವರ ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಇಲ್ಲಿ ಪರಿಗ್ರಹಿಸಲಾಗುತ್ತದೆ. ಈ ಮಹಾಪ್ರಬಂಧದ ಕೊನೆಯದಾದ ಅನುಬಂಧದಲ್ಲಿ ಛಾಯಾ ಚಿತ್ರಗಳು, ವಂಶವೃಕ್ಷ, ಹಸ್ತಾಕ್ಷರದ ಮಾದರಿ, ಪ.ಗು. ಸಿದ್ದಾಪುರ ಅವರ ಜೀವನದ ಪ್ರಮುಖ ಘಟನಾವಳಿಗಳು, ಗ್ರಂಥ ಋಣ ಮುಂತಾದ ವಿಷಯಗಳನ್ನು ಕೊಡಲಾಗುತ್ತದೆ. ಹೀಗೆ ೯ ಅಧ್ಯಾಯಗಳಲ್ಲಿ ಈ ಮಹಾಪ್ರಬಂಧವನ್ನು ಅಧ್ಯಯನ ಮಾಡಲಾಗುತ್ತದೆ. ಈ ಮೂಲಕ ಉಪೇಕ್ಷೆಗೆ ಗುರಿಯಾದ ಮಕ್ಕಳ ಸಾಹಿತ್ಯಕ್ಕೆ ಮತ್ತು ಮಕ್ಕಳ ಸಾಹಿತಿಗೆ ಸಂಶೋಧನಾ ಕ್ಷೇತ್ರದಲ್ಲಿ ನ್ಯಾಯ ಒದಗಿಸಲು ಪ್ರಯತ್ನಿಸಲಾಗುತ್ತದೆ.

ಮಾರ್ಗದರ್ಶಕರು
ಡಾ. ಮಹೇಶ ಚಿಂತಾಮಣಿ

ಸಂಶೋಧನಾ ವಿದ್ಯಾರ್ಥಿನಿ
ಮಣೂರ ಸುಧಾರಾಣಿ ಶಿವಪ್ಪಾ